1296 (175) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ (ಹುಬ್ಬಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಕಳೆದ 2006–07 ಮತ್ತು 2007–08ರಲ್ಲಿ ನಿವೃತ್ತಿ ಹೊಂದಿದ ಕಾರ್ಮಿಕರ ಸಂಖ್ಯೆ ಎಷ್ಟು; (ಘಟಕವಾರು ವಿವರ ನೀಡುವುದು);

ಆ) ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ನಿವೃತ್ತರಾದ ಕಾರ್ಮಿಕರಿಗೆ ನಿವೃತ್ತಿ ಸೌಲಭ್ಯಗಳಾದ ಗ್ರಾಚ್ಯುಟಿ, ಭವಿಷ್ಯನಿಧಿ, ಮುಂತಾದವುಗಳು ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಅದರ ಮೊತ್ತವೆಷ್ಟು;

ಇ) ಹಾಗಿದ್ದಲ್ಲಿ ಬಾಕಿ ಉಳಿದ ಮೊತ್ತ ಇನ್ನೂ ಎಷ್ಟು ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಒಟ್ಟು 672.

ವಿಭಾಗವಾರು ಮಾಹಿತಿ ಈ ಕೆಳಗಿನಂತಿದೆ.

ಕ್ರ ಸಂ.	ವಿಭಾಗ	ನಿವೃತ್ತ ಕಾರ್ಮಿಕರ ಸಂಖ್ಯೆ	
		2006–07	2007–08
1	ಬಾಗಲಕೋಟೆ	49	28
2	ಬೆಳಗಾವಿ	60	37
3	ಬಿಜಾಪುರ	72	39
4	ಚಿಕ್ಕೋಡಿ	31	33
5	ಗದಗ	23	26
6	ಹುಬ್ಬಳ್ಳಿ	61	46
7	ಹಾವೇರಿ	30	13
8	ಉತ್ತರ ಕನ್ನಡ ಶಿರಸಿ	56	29
9	ಪ್ರಾದೇಶಿಕ ಕಾರ್ಯಗಾರ ಹುಬ್ಬಳ್ಳಿ	22	11
10	ಕೇಂದ್ರ ಕಚೇರಿ	4	2
ಒಟ್ಟು		**408**	**264**

ಆ) ಬಂದಿವೆ.

ಸುಮಾರು ರೂ.4.6 ಕೋಟಿಗಳು.

ಇ) ಬಾಕಿ ಉಳಿದ ಉಪದಾನ ಮೊತ್ತವನ್ನು ಸೆಪ್ಟೆಂಬರ್–2007 ರವರೆಗೆ ಬಟವಾಡೆ ಮಾಡುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

1304 (1650) ಶ್ರೀ ಕೃಷ್ಣ ಪಾಲೇಮಾರ್ ಜೆ.(ಸುರತ್ಕಲ್) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಕ್ಷಗಾನಕ್ಕೆ ಪ್ರತ್ಯೇಕ ಅಸ್ತಿತ್ವ ನೀಡುವ ದಿಶೆಯಲ್ಲಿ ರಚಿಸುವ ಯಕ್ಷಗಾನ ಅಕಾಡೆಮಿಯ ವ್ಯಾಪ್ತಿಯ ವಿವರಗಳೇನು;

ಆ) ಉದ್ದೇಶಿತ ಯಕ್ಷಗಾನ ಅಕಾಡೆಮಿಯಲ್ಲಿ ವಿದ್ವಾಂಸರು, ಕಲಾವಿದರು, ಮೇಳದ ಯಜಮಾನರು, ಪ್ರಸಂಗಕರ್ತರು ಮುಂತಾಗಿ ಆಯಾಯ ಕ್ಷೇತ್ರದ ಅನುಭವಿಗಳಿಗೆ ಮಾತ್ರ ಅಕಾಡೆಮಿ ಸದಸ್ಯತ್ವ ನೀಡುವ ಕುರಿತು ಸರ್ಕಾರ ನಿಯಮಗಳನ್ನು ರಚಿಸುವುದೇ;

ಇ) ಯಕ್ಷಗಾನ ವಿವಿಧ ಪ್ರಕಾರಗಳಲ್ಲಿ ಅಲ್ಪಾವಧಿಯ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಹಾಗೂ ಆ ಕುರಿತಾದ ಪಠ್ಯ ನಿರ್ಮಿತಿಯನ್ನು ಸಿದ್ಧಪಡಿಸಲು ಸರ್ಕಾರ ಕ್ರಮ ಜರುಗಿಸುವುದೇ;

ಈ) ಯಕ್ಷಗಾನ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದ ನೂತನ ಯೋಜನೆಗಳೇನು?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಯಕ್ಷಗಾನ ಅಕಾಡೆಮಿಯ ವ್ಯಾಪ್ತಿಯ ಕರ್ನಾಟಕ ರಾಜ್ಯವನ್ನೊಳಗೊಂಡಿರುತ್ತದೆ.

ಆ) – ಹೌದು –

ಇ) ಅಕಾಡೆಮಿ ರಚನೆಯಾದ ಮೇಲೆ ಪರಿಣಿತರೊಂದಿಗೆ ಸಮಾಲೋಚಿಸಿ ಅನಂತರ ಪರಿಶೀಲಿಸಲಾಗುವುದು.

ಈ) ಯಕ್ಷಗಾನ ಅಕಾಡೆಮಿ ಅಸ್ತಿತ್ವಕ್ಕೆ ಬಂದ ನಂತರ ಸರ್ಕಾರ ಯಕ್ಷಗಾನ ಅಕಾಡೆಮಿಗಳಿಗೆ ಅಗತ್ಯ ಅಧಿಕಾರಿ, ಸಿಬ್ಬಂದಿ ಹಾಗೂ ಅಧ್ಯಕ್ಷರು, ಸದಸ್ಯರುಗಳನ್ನು ನಾಮನಿರ್ದೇಶನ ಮಾಡಿದ ನಂತರ ನೂತನ ಯೋಜನೆಗಳ ಬಗ್ಗೆ ರೂಪಿಸಲಾಗುವುದು.